ಶಾಲಾ ಶಿಕ್ಷಣ ಇಲಾಖೆ
ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು
Karnataka School Quality Assessment & Accreditation Council
ಕೆ.ಎಸ್.ಇ.ಎ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03. ದೂರವಾಣಿ ಸಂಖ್ಯೆ: 23341615, 23562283, 29720300
e-mail: ksqaacbangalore@gmail.com & ksqaacbengaluru@gmail.com

ಸಂಖ್ಯೆ: ಕೆ4/5, 8 ಮತ್ತು 9ನೇ.ಮೌ/06/2023-24 ದಿನಾಂಕ: 22.02.2024

# ಮಾರ್ಗಸೂಚಿ

**ವಿಷಯ:-** 2023-24 ನೇ ಸಾಲಿನಲ್ಲಿ 5, 8 ಮತ್ತು 9ನೇ ತರಗತಿ ವಿದ್ಯಾರ್ಥಿಗಳಿಗೆ ಮೌಲ್ಯಾಂಕನ ಕಾರ್ಯವನ್ನು ನಡೆಸುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಅಧಿಸೂಚನೆಯ ಸಂಖ್ಯೆ ಇಡಿ209, ಎಸ್ ಎಲ್ ಬಿ 2023 ದಿನಾಂಕ: 06.10.2023.
2. ಸರ್ಕಾರದ ಅಧಿಸೂಚನೆಯ ಸಂಖ್ಯೆ ಇಪಿ209, ಎಸ್ ಎಲ್ ಬಿ 2023 ದಿನಾಂಕ: 09.10.2023.
3. ಸರ್ಕಾರದ ಆದೇಶ ಸಂಖ್ಯೆ ಇಪಿ209ಎಸ್ ಎಲ್ ಬಿ 2023, ದಿನಾಂಕ: 16.11.2023.
4. ಮಾನ್ಯ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ರವರ ತಿದ್ದುಪಡಿ ಸುತ್ತೋಲೆ ಸಂಖ್ಯೆ :ಡಿ.ಎಸ್.ಇ.ಆರ್.ಟಿ/ ಇ.ವಿ.ಜಿ/1-10ಮೌಲ್ಯಾಂಕನ/2023-24, ದಿನಾಂಕ:28.12.2023
5. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ ಇಪಿ209 ಎಸ್ ಎಲ್ ಬಿ 2023, ದಿನಾಂಕ:08.01.2024
6. ಸರ್ಕಾರದ ಆದೇಶ ಸಂಖ್ಯೆ: ಇಪಿ 22 ಎಸ್.ಎಲ್.ಬಿ2024, ದಿನಾಂಕ:16.02.2024

*~*~*~*

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2023-24ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ 5, 8 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳಿಗೆ ಸಂಕಲನಾತ್ಮಕ ಮೌಲ್ಯಮಾಪನ (Summative Assessment-(SA-2) ಕಾರ್ಯವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ಕೆ.ಎಸ್.ಕ್ಯು.ಎ.ಎ.ಸಿ ವತಿಯಿಂದ ದಿನಾಂಕ: 11.03.2024 ರಿಂದ 18.03.2024 ರವರೆಗೆ ನಡೆಸಲಾಗುತ್ತಿದೆ. ಈ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಅಗತ್ಯವಿರುವ ಎಲ್ಲಾ ಸಿದ್ಧತೆಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಬೇಕಾಗಿರುವುದು ಇಲಾಖೆಯ ಎಲ್ಲಾ ಹಂತದ ಅಧಿಕಾರಿಗಳು/ಸಿಬ್ಬಂದಿ ವರ್ಗದವರ ಪ್ರಮುಖ ಜವಾಬ್ದಾರಿಯಾಗಿರುತ್ತದೆ.

**ವ್ಯಾಪ್ತಿ:-**

- ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ 5, 8 ಮತ್ತು 9ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಮೌಲ್ಯಾಂಕನ ನಡೆಸಲಾಗುವುದು.
- 5 ನೇ ತರಗತಿ ವಿದ್ಯಾರ್ಥಿಗಳಿಗೆ 4 ವಿಷಯಗಳಿಗೆ, 8 ಮತ್ತು 9ನೇ ತರಗತಿಗಳ ವಿದ್ಯಾರ್ಥಿಗಳಿಗೆ 6 ವಿಷಯಗಳಿಗೆ ವಿಷಯವಾರು ಪ್ರಶ್ನೆಪತ್ರಿಕೆಗಳನ್ನು ನೀಡುವ ಮೂಲಕ ಮೌಲ್ಯಾಂಕನ ನಡೆಸಲಾಗುವುದು.
- 5 ನೇ ತರಗತಿಯ ವಿದ್ಯಾರ್ಥಿಗಳ ಸಂಖ್ಯೆ – **9,30,715**
- 8 ನೇ ತರಗತಿಯ ವಿದ್ಯಾರ್ಥಿಗಳ ಸಂಖ್ಯೆ – **9,35,076**
- 9ನೇ ತರಗತಿಯ ವಿದ್ಯಾರ್ಥಿಗಳ ಸಂಖ್ಯೆ– **9,48,313**
- **ಒಟ್ಟು ವಿದ್ಯಾರ್ಥಿಗಳ ಸಂಖ್ಯೆ – 28,14,104**
- **ಒಟ್ಟು ಶಾಲೆಗಳ ಸಂಖ್ಯೆ:- 69137**

(ದತ್ತಾಂಶದ ಮಾಹಿತಿಯನ್ನು ಎಸ್.ಎ.ಟಿ.ಎಸ್. ನಿಂದ ಪಡೆಯಲಾಗಿರುತ್ತದೆ.)

**ಮಾಧ್ಯಮ:–**

ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಮರಾಠಿ, ತಮಿಳು, ತೆಲುಗು.

**ವಿಷಯ:–**

- **5ನೇ ತರಗತಿಗೆ:–** ಪ್ರಥಮ ಭಾಷೆ, ದ್ವಿತೀಯ ಭಾಷೆ, ಗಣಿತ ಮತ್ತು ಪರಿಸರ ಅಧ್ಯಯನ.

  **ಪ್ರಥಮ ಭಾಷೆ:–** ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಮರಾಠಿ, ತಮಿಳು, ತೆಲುಗು.
  **ದ್ವಿತೀಯ ಭಾಷೆ:–** ಕನ್ನಡ, ಇಂಗ್ಲಿಷ್ ಮತ್ತು ಇಂಗ್ಲಿಷ್(Bilingual)
  **ಕೋರ್ ವಿಷಯ:–** ಗಣಿತ, ಪರಿಸರ ಅಧ್ಯಯನ ಮತ್ತು ಗಣಿತ(Bilingual)

- **8 ಮತ್ತು 9ನೇ ತರಗತಿಗೆ:–** ಪ್ರಥಮ ಭಾಷೆ, ದ್ವಿತೀಯ ಭಾಷೆ, ತೃತೀಯ ಭಾಷೆ, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ.

  **ಪ್ರಥಮ ಭಾಷೆ:–** ಕನ್ನಡ, ಇಂಗ್ಲಿಷ್, ಇಂಗ್ಲಿಷ್(NCERT), ಹಿಂದಿ, ಉರ್ದು, ಮರಾಠಿ, ತಮಿಳು, ತೆಲುಗು, ಸಂಸ್ಕೃತ.
  **ದ್ವಿತೀಯ ಭಾಷೆ:–** ಕನ್ನಡ ಮತ್ತು ಇಂಗ್ಲಿಷ್
  **ತೃತೀಯ ಭಾಷೆ:–** ಕನ್ನಡ, ಇಂಗ್ಲಿಷ್, ಹಿಂದಿ, ಹಿಂದಿ(NCERT), ಉರ್ದು, ಸಂಸ್ಕೃತ, ಕೊಂಕಣಿ(ಕನ್ನಡ ಮತ್ತು ದೇವನಾಗರಿ), ತುಳು, ಪರ್ಷಿಯನ್, ಅರೇಬಿಕ್.
  9ನೇ ತರಗತಿಗೆ NSQF ವಿಷಯಗಳು: Automobile, Beauty &Wellness, Information Technology, Retail, Apparel made-ups & Home furnishing, Electronics and hardware.
  **ಕೋರ್ ವಿಷಯ:–** ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ.

**ಮೌಲ್ಯಾಂಕನ ಪ್ರಶ್ನೆಪತ್ರಿಕೆ ಸ್ವರೂಪ:–**

- 5, 8 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳಿಗೆ ದಿನವೊಂದಕ್ಕೆ ಒಂದು ವಿಷಯದಂತೆ ಮೌಲ್ಯಾಂಕನ ನಡೆಸಲಾಗುವುದು.
- 5ನೇ ತರಗತಿಯ ವಿದ್ಯಾರ್ಥಿಗಳಿಗೆ ಉಲ್ಲೇಖ–4 ರ ಸುತ್ತೋಲೆಯಂತೆ ನವೆಂಬರ್–2023 ರ ಮಾಹೆಯಿಂದ ಫೆಬ್ರವರಿ–2024 ರ ಮಾಹೆಯವರೆಗಿನ ಪಠ್ಯವಸ್ತುವನ್ನು ಆಧರಿಸಿ ಪ್ರಶ್ನೆಪತ್ರಿಕೆಗಳನ್ನು ರಚಿಸಲಾಗಿರುತ್ತದೆ.
- **5ನೇ ತರಗತಿಗೆ ಪ್ರತಿ ವಿಷಯಕ್ಕೆ 50 ಅಂಕಗಳಿಗೆ ಮೌಲ್ಯಾಂಕನ ನಡೆಸಲಾಗುವುದು. 40 ಅಂಕಗಳ ಲಿಖಿತ ಪರೀಕ್ಷೆಗೆ ರಾಜ್ಯ ಹಂತದಿಂದ ಪ್ರಶ್ನೆಪತ್ರಿಕೆಗಳನ್ನು ನೀಡಲಾಗುವುದು ಮತ್ತು 10 ಅಂಕಗಳಿಗೆ ಮೌಖಿಕ ಪರೀಕ್ಷೆಯನ್ನು ಶಾಲಾ ಹಂತದಲ್ಲಿಯೇ ನಿರ್ವಹಿಸುವುದು.**
- 5ನೇ ತರಗತಿಯ ಪ್ರತಿ ವಿಷಯದ ಮೌಲ್ಯಾಂಕನಕ್ಕೆ 2 ಗಂಟೆಗಳ ಅವಧಿಯನ್ನು ನಿಗದಿಪಡಿಸಲಾಗಿದೆ.
- 8ನೇ ತರಗತಿಯ ವಿದ್ಯಾರ್ಥಿಗಳಿಗೆ ಉಲ್ಲೇಖ–4 ರ ಸುತ್ತೋಲೆಯಂತೆ ಜೂನ್–2023 ರ ಮಾಹೆಯಿಂದ ಫೆಬ್ರವರಿ–2024 ರ ಮಾಹೆಯವರೆಗಿನ ವಾರ್ಷಿಕ ಪಠ್ಯವಸ್ತುವನ್ನು ಆಧರಿಸಿ ಪ್ರಶ್ನೆಪತ್ರಿಕೆಗಳನ್ನು ರಚಿಸಲಾಗಿರುತ್ತದೆ.
- **8ನೇ ತರಗತಿಗೆ ಪ್ರತಿ ವಿಷಯಕ್ಕೆ 60ಅಂಕಗಳಿಗೆ ಮೌಲ್ಯಾಂಕನ ನಡೆಸಲಾಗುವುದು. 50 ಅಂಕಗಳ ಲಿಖಿತ ಪರೀಕ್ಷೆಗೆ ರಾಜ್ಯ ಹಂತದಿಂದ ಪ್ರಶ್ನೆಪತ್ರಿಕೆಗಳನ್ನು ನೀಡಲಾಗುವುದು ಮತ್ತು 10 ಅಂಕಗಳಿಗೆ ಮೌಖಿಕ ಪರೀಕ್ಷೆಯನ್ನು ಶಾಲಾ ಹಂತದಲ್ಲಿಯೇ ನಿರ್ವಹಿಸುವುದು.**
- 8ನೇ ತರಗತಿಯ ಪ್ರತಿ ವಿಷಯದ ಮೌಲ್ಯಾಂಕನಕ್ಕೆ 2.30 ಗಂಟೆಗಳ ಅವಧಿಯನ್ನು ನಿಗದಿಪಡಿಸಲಾಗಿದೆ.
- **ವಿ.ಸೂಚನೆ: 8ನೇ ತರಗತಿಯ ದೈಹಿಕ ಶಿಕ್ಷಣ ವಿಷಯಕ್ಕೆ ಸಂಬಂಧಿಸಿದಂತೆ ಮೌಖಿಕ ಪರೀಕ್ಷೆ ಇಲ್ಲವಾದ ಕಾರಣ ಮೌಲ್ಯಾಂಕನವನ್ನು 50 ಅಂಕಗಳಿಗೆ ಬದಲಾಗಿ 60 ಅಂಕಗಳಿಗೆ ನಿಗದಿಪಡಿಸಲಾಗಿದೆ.**
- **9ನೇ ತರಗತಿಯ ವಿದ್ಯಾರ್ಥಿಗಳಿಗೆ ಉಲ್ಲೇಖ–4 ರ ಸುತ್ತೋಲೆಯಂತೆ ಆಯಾ ಭಾಷೆ ಹಾಗೂ ಕೋರ್ ವಿಷಯಗಳಿಗೆ ನಿಗದಿಪಡಿಸಿದ ವಾರ್ಷಿಕ ಪಠ್ಯವಸ್ತುವನ್ನು ಆಧರಿಸಿ ಪ್ರಶ್ನೆಪತ್ರಿಕೆಗಳನ್ನು ರಚಿಸಲಾಗಿರುತ್ತದೆ.**
- 9ನೇ ತರಗತಿಯ ಪ್ರಥಮ ಭಾಷಾ ವಿಷಯಕ್ಕೆ 100 ಅಂಕಗಳಿಗೆ ಲಿಖಿತ ಪರೀಕ್ಷೆ ಉಳಿದ ವಿಷಯಗಳಾದ ದ್ವಿತೀಯ, ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 80 ಅಂಕಗಳ ಲಿಖಿತ ಪರೀಕ್ಷೆಗೆ ರಾಜ್ಯ ಹಂತದಿಂದ ಪ್ರಶ್ನೆಪತ್ರಿಕೆಗಳನ್ನು ನೀಡಲಾಗುವುದು.

- 9ನೇ ತರಗತಿಯ ತೃತೀಯ ಭಾಷೆಯ ಬದಲಾಗಿ ಎನ್.ಎಸ್.ಕ್ಯು.ಎಫ್ ವಿಷಯಗಳನ್ನು ತೆಗೆದುಕೊಂಡಿರುವ ವಿದ್ಯಾರ್ಥಿಗಳಿಗೂ 60 ಅಂಕಗಳ ಪ್ರಶ್ನೆ ಪತ್ರಿಕೆಗಳನ್ನು ರಾಜ್ಯ ಹಂತದಿಂದ ನೀಡಲಾಗುವುದು.
- 9ನೇ ತರಗತಿಯ ಪ್ರಥಮ ಭಾಷಾ ವಿಷಯ ಮತ್ತು ಕೋರ್ ವಿಷಯಗಳ ಮೌಲ್ಯಾಂಕನಕ್ಕೆ 3.15 ನಿಮಿಷಗಳು ಹಾಗೂ ಉಳಿದ ಎಲ್ಲಾ ವಿಷಯಗಳ ಮೌಲ್ಯಾಂಕನಕ್ಕೆ 3.00 ಗಂಟೆಗಳ ಅವಧಿಯನ್ನು ನಿಗದಿಪಡಿಸಲಾಗಿದೆ.
- ವಿದ್ಯಾರ್ಥಿಗಳನ್ನು ಮೌಲ್ಯಾಂಕನಕ್ಕೆ ಸಿದ್ಧಗೊಳಿಸಲು ಮಾದರಿ ಪ್ರಶ್ನೆಪತ್ರಿಕೆಗಳನ್ನು ಮಂಡಲಿಯ ವೆಬ್‌ಸೈಟ್‌ನಲ್ಲಿ ಈಗಾಗಲೇ ಪ್ರಕಟಿಸಲಾಗಿದ್ದು, ಅದರಂತೆ ಅಭ್ಯಸಿಸುವುದು.

## ಮಾರ್ಚ್ –2024ರ 5ನೇ ತರಗತಿ ಮೌಲ್ಯಾಂಕನದ (SA-2) ವೇಳಾಪಟ್ಟಿ

| ದಿನಾಂಕ ಮತ್ತು ವಾರ | ವಿಷಯ | ಸಮಯ | ಒಟ್ಟು ಅವಧಿ | ಗರಿಷ್ಠ ಅಂಕಗಳು |
|---|---|---|---|---|
| 11.03.2024 (ಸೋಮವಾರ) | **ಪ್ರಥಮ ಭಾಷೆ**<br>ಕನ್ನಡ<br>ಇಂಗ್ಲಿಷ್<br>ಹಿಂದಿ<br>ಉರ್ದು<br>ಮರಾಠಿ<br>ತೆಲುಗು<br>ತಮಿಳು | ಮ.2.30 ರಿಂದ 4.30 | 2.00 ಗಂಟೆ | <br>40<br>40<br>40<br>40<br>40<br>40<br>40 |
| 12.03.2024 (ಮಂಗಳವಾರ) | **ದ್ವಿತೀಯ ಭಾಷೆ**<br>ಇಂಗ್ಲಿಷ್<br>ಇಂಗ್ಲಿಷ್ (Bilingual)<br>ಕನ್ನಡ | ಮ.2.30 ರಿಂದ 4.30 | 2.00 ಗಂಟೆ | <br>40<br>40<br>40 |
| 13.03.2024 (ಬುಧವಾರ) | **ಕೋರ್ ವಿಷಯ:**<br>ಪರಿಸರ ಅಧ್ಯಯನ | ಮ.2.30 ರಿಂದ 4.30 | 2.00 ಗಂಟೆ | 40 |
| 14.03.2024 (ಗುರುವಾರ) | **ಕೋರ್ ವಿಷಯ:**<br>ಗಣಿತ<br>ಗಣಿತ (Bilingual) | ಮ.2.30 ರಿಂದ 4.30 | 2.00 ಗಂಟೆ | <br>40<br>40 |

## ಮಾರ್ಚ್ –2024ರ 8ನೇ ತರಗತಿ ಮೌಲ್ಯಾಂಕನ (SA-2) ಕಾರ್ಯದ ವೇಳಾಪಟ್ಟಿ

| ದಿನಾಂಕ ಮತ್ತು ವಾರ | ವಿಷಯ | ಸಮಯ | ಒಟ್ಟು ಅವಧಿ | ಗರಿಷ್ಠ ಅಂಕಗಳು |
|---|---|---|---|---|
| 11.03.2024 (ಸೋಮವಾರ) | **ಪ್ರಥಮ ಭಾಷೆ**<br>ಕನ್ನಡ<br>ಇಂಗ್ಲಿಷ್<br>ಇಂಗ್ಲಿಷ್(NCERT)<br>ಹಿಂದಿ<br>ಉರ್ದು<br>ಮರಾಠಿ<br>ತೆಲುಗು<br>ತಮಿಳು<br>ಸಂಸ್ಕೃತ | ಮ.2.30 ರಿಂದ 5.00 | 2.30 ಗಂಟೆ | <br>50<br>50<br>50<br>50<br>50<br>50<br>50<br>50<br>50 |

| | | | | |
|---|---|---|---|---|
| **12.03.2024**<br>(ಮಂಗಳವಾರ) | **ದ್ವಿತೀಯ ಭಾಷೆ**<br>ಇಂಗ್ಲಿಷ್<br>ಕನ್ನಡ | ಮ.2.30 ರಿಂದ 5.00 | 2.30 ಗಂಟೆ | 50<br>50 |
| **13.03.2024**<br>(ಬುಧವಾರ) | **ತೃತೀಯ ಭಾಷೆ**<br>ಹಿಂದಿ<br>ಹಿಂದಿ (NCERT)<br>ಕನ್ನಡ<br>ಇಂಗ್ಲಿಷ್<br>ಅರೇಬಿಕ್<br>ಪರ್ಷಿಯನ್<br>ಉರ್ದು<br>ಸಂಸ್ಕೃತ<br>ಕೊಂಕಣಿ<br>ತುಳು | ಮ.2.30 ರಿಂದ 5.00 | 2.30 ಗಂಟೆ | 50<br>50<br>50<br>50<br>50<br>50<br>50<br>50<br>50<br>50 |
| **14.03.2024**<br>(ಗುರುವಾರ) | **ಕೋರ್ ವಿಷಯ:**<br>ಗಣಿತ | ಮ.2.30 ರಿಂದ 5.00 | 2.30 ಗಂಟೆ | 50 |
| **15.03.2024**<br>(ಶುಕ್ರವಾರ) | **ಕೋರ್ ವಿಷಯ:**<br>ವಿಜ್ಞಾನ | ಮ.2.30 ರಿಂದ 5.00 | 2.30 ಗಂಟೆ | 50 |
| **16.03.2024**<br>(ಶನಿವಾರ) | **ಕೋರ್ ವಿಷಯ:**<br>ಸಮಾಜ ವಿಜ್ಞಾನ | ಮ.2.30 ರಿಂದ 5.00 | 2.30 ಗಂಟೆ | 50 |
| **18.03.2024**<br>(ಸೋಮವಾರ) | ದೈಹಿಕ ಶಿಕ್ಷಣ | ಮ.2.30 ರಿಂದ 5.00 | 2.30 ಗಂಟೆ | 60 |

## ಮಾರ್ಚ್ –2024ರ 9ನೇ ತರಗತಿ ಮೌಲ್ಯಾಂಕನ (SA-2) ಕಾರ್ಯದ ವೇಳಾಪಟ್ಟಿ

| ದಿನಾಂಕ ಮತ್ತು ವಾರ | ವಿಷಯ | ಸಮಯ | ಒಟ್ಟು ಅವಧಿ | ಗರಿಷ್ಠ ಅಂಕಗಳು |
|---|---|---|---|---|
| **11.03.2024**<br>(ಸೋಮವಾರ) | **ಪ್ರಥಮ ಭಾಷೆ**<br>ಕನ್ನಡ<br>ಇಂಗ್ಲಿಷ್<br>ಇಂಗ್ಲಿಷ್ (NCERT)<br>ಹಿಂದಿ<br>ಉರ್ದು<br>ಮರಾಠಿ<br>ತೆಲುಗು<br>ತಮಿಳು<br>ಸಂಸ್ಕೃತ | ಮ.2.00 ರಿಂದ 5.15 | 3.15 ಗಂಟೆ | 100<br>100<br>100<br>100<br>100<br>100<br>100<br>100<br>100 |
| **12.03.2024**<br>(ಮಂಗಳವಾರ) | **ದ್ವಿತೀಯ ಭಾಷೆ**<br>ಇಂಗ್ಲಿಷ್<br>ಕನ್ನಡ | ಮ.2.00 ರಿಂದ 5.00 | 3.00 ಗಂಟೆ | 80<br>80 |

| | | | | |
|---|---|---|---|---|
| 13.03.2024 (ಬುಧವಾರ) | **ತೃತೀಯ ಭಾಷೆ**<br>ಹಿಂದಿ<br>ಹಿಂದಿ (NCERT)<br>ಕನ್ನಡ<br>ಇಂಗ್ಲಿಷ್<br>ಅರೇಬಿಕ್<br>ಪರ್ಷಿಯನ್<br>ಉರ್ದು<br>ಸಂಸ್ಕೃತ<br>ಕೊಂಕಣಿ<br>ತುಳು | ಮ.2.00 ರಿಂದ 5.00 | 3.00 ಗಂಟೆ | 80<br>80<br>80<br>80<br>80<br>80<br>80<br>80<br>80<br>80 |
| | **NSQF** | ಮ.2.00 ರಿಂದ 4.15 | 2.15 ಗಂಟೆ | 60 |
| 14.03.2024 (ಗುರುವಾರ) | **ಕೋರ್ ವಿಷಯ:**<br>ಗಣಿತ | ಮ.2.00 ರಿಂದ 5.15 | 3.15 ಗಂಟೆ | 80 |
| 15.03.2024 (ಶುಕ್ರವಾರ) | **ಕೋರ್ ವಿಷಯ:**<br>ವಿಜ್ಞಾನ | ಮ.2.00 ರಿಂದ 5.15 | 3.15 ಗಂಟೆ | 80 |
| 16.03.2024 (ಶನಿವಾರ) | **ಕೋರ್ ವಿಷಯ:**<br>ಸಮಾಜ ವಿಜ್ಞಾನ | ಮ.2.00 ರಿಂದ 5.15 | 3.15 ಗಂಟೆ | 80 |
| 18.03.2024 (ಸೋಮವಾರ) | ದೈಹಿಕ ಶಿಕ್ಷಣ | ಮ.2.00 ರಿಂದ 5.00 | 3.00 ಗಂಟೆ | 80 |

- 8 ಮತ್ತು 9ನೇ ತರಗತಿಗಳ ಪ್ರಥಮ ಭಾಷೆ – ಇಂಗ್ಲೀಷ್ (NCERT) ಮತ್ತು ತೃತೀಯ ಭಾಷೆ – ಹಿಂದಿ (NCERT) ವಿಷಯಗಳು ಆದರ್ಶ ವಿದ್ಯಾಲಯಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುತ್ತವೆ.
- **ದಿನಾಂಕ: 04.03.2024 ರಿಂದ 07.03.2024** ರವರೆಗೆ ವಿದ್ಯಾರ್ಥಿಗಳಿಗೆ ಮೌಖಿಕ ಪರೀಕ್ಷೆಗಳನ್ನು ಆಯಾ ಶಾಲೆಗಳಲ್ಲಿ ನಿರ್ವಹಿಸುವುದು.
- ಇಂಗ್ಲೀಷ್ (Bilingual) ಮತ್ತು ಗಣಿತ (Bilingual) ವಿಷಯಗಳು **5ನೇ ತರಗತಿಯ ಸರ್ಕಾರಿ ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೆ (Bilingual)** ಮಾತ್ರ ಅನ್ವಯವಾಗುತ್ತದೆ.
- ವಿಶೇಷ ಶಾಲೆಗಳ ವಿದ್ಯಾರ್ಥಿಗಳಿಗೆ ಮಂಡಲಿಯಿಂದ ಸರಬರಾಜು ಮಾಡುವ ಪ್ರಶ್ನೆಪತ್ರಿಕೆಗಳನ್ನೇ ಬಳಸಿ ಶಾಲಾ ಹಂತದಲ್ಲಿ ಹಿಂದಿನ ಸಾಲುಗಳಲ್ಲಿ ನಡೆಸಿದಂತೆ ಮೌಲ್ಯಾಂಕನ ನಡೆಸುವುದು.
- ವಿಶೇಷ ಚೇತನ ವಿದ್ಯಾರ್ಥಿಗಳಿಗೆ RPW Act 2016 ರಂತೆ ನಿಯಮಾನುಸಾರ ಸೌಲಭ್ಯಗಳನ್ನು ಒದಗಿಸುವುದು.
- ದೈಹಿಕ ಶಿಕ್ಷಣ ವಿಷಯಗಳಿಗೆ ಮಾದರಿ ಪ್ರಶ್ನೆಪತ್ರಿಕೆಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದು ಅದರ ಅನುಸಾರ ಶಾಲೆಯಲ್ಲಿಯೇ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿಕೊಂಡು ಮೌಲ್ಯಾಂಕನ ನಡೆಸುವುದು.
- ಮಂಡಲಿ ವತಿಯಿಂದ ಮೌಲ್ಯಾಂಕನ ನಡೆಸುವ ವಿಷಯಗಳನ್ನು ಹೊರತುಪಡಿಸಿ ಉಳಿದೆಲ್ಲಾ ವಿಷಯಗಳಿಗೂ ಮಂಡಲಿಯಿಂದ ನಿಗದಿಪಡಿಸಿರುವ ದಿನಾಂಕಕ್ಕಿಂತ ಮೊದಲೇ ತಮ್ಮ ಶಾಲಾ ಹಂತದಲ್ಲಿಯೇ ಮೌಲ್ಯಾಂಕನ ನಡೆಸುವುದು.

## ಮೌಲ್ಯಾಂಕನ ಪ್ರಕ್ರಿಯೆ:

- ಶಾಲಾವಾರು, ತರಗತಿವಾರು, ಮಾಧ್ಯಮವಾರು, ಭಾಷಾವಾರು ವಿದ್ಯಾರ್ಥಿಗಳ ಸಂಖ್ಯೆ ಹಾಗೂ ವಿದ್ಯಾರ್ಥಿಗಳ ಮಾಹಿತಿ ಸಂಗ್ರಹ– **ಎಸ್.ಎ.ಟಿ.ಎಸ್ ನಿಂದ**
- ಪ್ರಶ್ನೆಪತ್ರಿಕೆ ರಚನೆ, ಮುದ್ರಣ ಹಾಗೂ ತಾಲ್ಲೂಕು ಹಂತಕ್ಕೆ ಸರಬರಾಜು –**ಕೆ.ಎಸ್.ಇ.ಎ.ಬಿ ವತಿಯಿಂದ**

- ರಾಜ್ಯ ಕಛೇರಿಯಿಂದ ತಾಲ್ಲೂಕು ಹಂತಕ್ಕೆ ಸರಬರಾಜಾದ ಪ್ರಶ್ನೆಪತ್ರಿಕೆಗಳನ್ನು ಶಾಲೆಗಳಿಗೆ ರವಾನಿಸುವುದು ಹಾಗೂ ಮೌಲ್ಯಾಂಕನ ಕಾರ್ಯ ಪೂರ್ಣಗೊಂಡ ನಂತರ ನಿಗದಿಪಡಿಸಿದ ಮೌಲ್ಯಮಾಪನ ಕೇಂದ್ರಕ್ಕೆ ರವಾನೆ ಮತ್ತು ಮೌಲ್ಯಮಾಪನಗೊಂಡ ನಂತರ ಶಾಲೆಗಳಿಗೆ ಮರುರವಾನೆ – **ಕ್ಷೇತ್ರಶಿಕ್ಷಣಾಧಿಕಾರಿಗಳು.**
- **ಮೌಲ್ಯಮಾಪನ ಕಾರ್ಯ**: 5, 8, 9ನೇ ತರಗತಿ ಮೌಲ್ಯಮಾಪನ ಕಾರ್ಯವನ್ನು ತಾಲ್ಲೂಕು ಕೇಂದ್ರದಲ್ಲಿ ಅಂತರ್ ಕ್ಲಸ್ಟರ್‌ವಾರು (Inter cluster) – **ಡಯಟ್ ಉಪನ್ಯಾಸಕರು, ಕ್ಷೇತ್ರಶಿಕ್ಷಣಾಧಿಕಾರಿಗಳು, ಕ್ಷೇತ್ರಸಮನ್ವಯಾಧಿಕಾರಿಗಳು**
- ಮೌಲ್ಯಮಾಪನ ನಡೆಸಿದ ನಂತರ ವಿದ್ಯಾರ್ಥಿಗಳು ಗಳಿಸಿದ ಲಿಖಿತ ಮತ್ತು ಮೌಖಿಕ ಅಂಕಗಳನ್ನು ಕ್ರೋಢೀಕರಿಸಿ ಗ್ರೇಡ್‌ಗಳಿಗೆ ಪರಿವರ್ತಿಸಿ ಎಸ್.ಎ.ಟಿ.ಎಸ್. ನಲ್ಲಿ ನಮೂದಿಸುವುದು ಮತ್ತು ಫಲಿತಾಂಶ ನೀಡುವ ಕಾರ್ಯ – **ಶಾಲಾ ಮುಖ್ಯ ಶಿಕ್ಷಕರು**

**ಉಪನಿರ್ದೇಶಕರು(ಆಡಳಿತ) ರವರ ಜವಾಬ್ದಾರಿಗಳು:**

➢ **ಪೂರ್ವ ತಯಾರಿ:**

- ತಮ್ಮ ಜಿಲ್ಲಾ ಹಂತದಿಂದ EO/DyPC/APCO/SI ಗಳನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡುವುದು.
- ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳ 5, 8 ಮತ್ತು 9ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳು ಎಸ್.ಎ.ಟಿ.ಎಸ್.ನಲ್ಲಿ ನೋಂದಾಯಿಸಿಕೊಳ್ಳುವಂತೆ ಮತ್ತು ಯಾವುದೇ ವಿದ್ಯಾರ್ಥಿಗಳು ಮೌಲ್ಯಾಂಕನದಿಂದ ವಂಚಿತರಾಗದಂತೆ ಸೂಕ್ತ ಕ್ರಮವಹಿಸುವುದು.
- ರಾಜ್ಯ ಕಛೇರಿಯಿಂದ ನೀಡಲಾಗುವ ಮಾರ್ಗಸೂಚಿಯನ್ನು ಅನುಸರಿಸಿ ತಮ್ಮ ಜಿಲ್ಲೆಯಲ್ಲಿನ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಪ್ರಶ್ನೆಪತ್ರಿಕೆಗಳು ಬ್ಲಾಕ್ ಹಂತಕ್ಕೆ ಸರಬರಾಜಾಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು ಮತ್ತು ಅಗತ್ಯ ಕ್ರಮಕೈಗೊಳ್ಳುವುದು.
- ಕ್ಷೇತ್ರಶಿಕ್ಷಣಾಧಿಕಾರಿಗಳು ಬ್ಲಾಕ್ ಹಂತಕ್ಕೆ ಸರಬರಾಜಾಗಿರುವ ಪ್ರಶ್ನೆಪತ್ರಿಕೆಗಳನ್ನು ಶಾಲಾ ಹಂತಕ್ಕೆ ಸರಿಯಾದ ಸಮಯಕ್ಕೆ ತಲುಪಿಸುವಂತೆ ಸೂಚಿಸಿ ಕ್ರಮವಹಿಸುವುದು.
- ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ಉತ್ತರಿಸಲು ಅವಶ್ಯಕವಿರುವ ಉತ್ತರ ಹಾಳೆಯ ಮುಖಪುಟದ ಮಾದರಿಯನ್ನು ರಾಜ್ಯ ಕಛೇರಿಯಿಂದ ವೆಬ್‌ಸೈಟ್‌ನಲ್ಲಿ ಲಭ್ಯ ಮಾಡಲಾಗುವುದು ಅದರಂತೆ ವಿದ್ಯಾರ್ಥಿಗಳು ಉತ್ತರಿಸಬೇಕಾದ ಹಾಳೆಗಳೊಂದಿಗೆ ಮುಖ ಪುಟವನ್ನು ಸೇರಿಸಿ ಮೌಲ್ಯಾಂಕನಕ್ಕೆ ಹಾಜರಾಗುವಂತೆ ಶಾಲೆಗಳ ಮುಖ್ಯ ಶಿಕ್ಷಕರು/ಪ್ರಾಂಶುಪಾಲರು ತಿಳಿಸುವಂತೆ ಸೂಚಿಸಿ ಕ್ರಮವಹಿಸುವುದು.
- ವಿದ್ಯಾರ್ಥಿಗಳ ಮಾಧ್ಯಮ, ಪ್ರಥಮ ಭಾಷೆ, ದ್ವಿತೀಯ ಭಾಷೆ, ತೃತೀಯ ಭಾಷೆಗಳನ್ನು ಸರಿಯಾಗಿ ಎಸ್.ಎ.ಟಿ.ಎಸ್.ನಲ್ಲಿ ನಮೂದಿಸಲಾಗಿದೆಯೇ ಎಂದು ಪರಿಶೀಲಿಸಿಕೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿ ಸೂಕ್ತ ಕ್ರಮವಹಿಸುವುದು.
- ಆಯಾ ಶಾಲೆಗಳೇ ಮೌಲ್ಯಾಂಕನ ಕೇಂದ್ರಗಳಾಗಿದ್ದು, ಶಾಲಾ ಮುಖ್ಯಶಿಕ್ಷಕರನ್ನು ಮುಖ್ಯ ಅಧೀಕ್ಷಕರನ್ನಾಗಿ ಹಾಗೂ ಕೊಠಡಿ ಮೇಲ್ವಿಚಾರಕರನ್ನಾಗಿ ಕ್ಲಸ್ಟರ್ ವ್ಯಾಪ್ತಿಯ ಶಾಲೆಗಳ ಶಿಕ್ಷಕರನ್ನು ಬದಲಾಯಿಸಿ ನಿಯೋಜಿಸುವಂತೆ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಚಿಸುವುದು. ನಿಯೋಜನೆ ಮಾಡುವ ಸಂಬಂಧ ಕ್ಷೇತ್ರಶಿಕ್ಷಣಾಧಿಕಾರಿಗಳು ಕ್ರಮವಹಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- ಮಾದರಿ ಪ್ರಶ್ನೆಪತ್ರಿಕೆಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು, ಎಲ್ಲಾ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲಿಸುವುದು ಮತ್ತು ಈ ಸಂಬಂಧ ಶಾಲೆಗಳ ಮುಖ್ಯ ಶಿಕ್ಷಕರಿಗೆ ಮಾಹಿತಿ ನೀಡುವುದು.
- ಮೌಲ್ಯಾಂಕನದ ವೇಳಾಪಟ್ಟಿಯ ಮಾಹಿತಿಯನ್ನು ಎಲ್ಲಾ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ನೀಡುವುದು.

➢ **ಮೌಲ್ಯಾಂಕನದ ದಿನ:**

- ಎಲ್ಲಾ ಶಾಲೆಗಳಿಗೆ ಪ್ರಶ್ನೆಪತ್ರಿಕೆಗಳು ವಿತರಣೆಯಾಗಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು ಹಾಗೂ ನಿಗದಿತ ವೇಳಾಪಟ್ಟಿಯಂತೆ ಮೌಲ್ಯಾಂಕನ ಕಾರ್ಯನಿರ್ವಹಿಸುವುದು.

- ಶಾಲೆಗಳಲ್ಲಿ ಯಾವುದೇ ಗೊಂದಲಕ್ಕೆ ಆಸ್ಪದ ನೀಡದಂತೆ ಮೌಲ್ಯಾಂಕನವನ್ನು ನಡೆಸುವ ಬಗ್ಗೆ ಕ್ರಮವಹಿಸುವುದು ಹಾಗೂ ಮೌಲ್ಯಾಂಕನವು ಯಶಸ್ವಿಯಾಗಿ ನಡೆದಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- ಪ್ರತಿದಿನದ ಮೌಲ್ಯಾಂಕನ ಕಾರ್ಯ ಪೂರ್ಣಗೊಂಡ ನಂತರ ಆಯಾ ದಿನವೇ ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರು ಉತ್ತರಿಸಿದ ಉತ್ತರಪತ್ರಿಕೆಗಳ ಲಕೋಟೆಗಳನ್ನು ಸಿ.ಆರ್.ಪಿ ರವರಿಗೆ ರವಾನಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- ಸಿ.ಆರ್.ಪಿಗಳು/ನಿಯೋಜಿತ ಅಧಿಕಾರಿಗಳು ಪ್ರತಿದಿನದ ಮೌಲ್ಯಾಂಕನ ಕಾರ್ಯ ಪೂರ್ಣಗೊಂಡ ನಂತರ ಉತ್ತರಿಸಿದ ಬಂಡಲ್‌ಗಳನ್ನು ಸರಿಯಾಗಿ ಬಂಡಲ್ ಮಾಡಿ ಸಂರಕ್ಷಿಸಿಟ್ಟು ಅಂತಿಮ ದಿನದ ಮೌಲ್ಯಾಂಕನ ಮುಕ್ತಾಯವಾದ ನಂತರ ಎಲ್ಲಾ ದಿನದ ಬಂಡಲ್‌ಗಳನ್ನು ನಿಯೋಜಿತ ಅಧಿಕಾರಿಗಳಿಗೆ ನೀಡುವ ಬಗ್ಗೆ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಚಿಸುವುದು.

➢ **ಮೌಲ್ಯಾಂಕನದ ನಂತರ :**

- ಮೌಲ್ಯಮಾಪನ ಕಾರ್ಯವನ್ನು ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ನೀಡಲಾಗಿದ್ದು, ಈ ಸಂಬಂಧ ಪರೀಕ್ಷಾ ಮೌಲ್ಯಮಾಪನ ಕಾರ್ಯದ ನಿರ್ವಹಣೆಗಾಗಿ ತಮ್ಮ ಜಿಲ್ಲೆಯ ಎಲ್ಲಾ ಬಿ.ಆರ್.ಸಿ/ವಿಷಯ ಪರಿವೀಕ್ಷಕರು/ಡಯಟ್‌ನ ಉಪನ್ಯಾಸಕರನ್ನು ನೇಮಿಸುವುದು. ಈಗಾಗಲೇ ಆಯ್ಕೆ ಮಾಡಿಕೊಂಡಿರುವ ಮೌಲ್ಯಮಾಪನ ಕೇಂದ್ರಗಳ ಮಾಹಿತಿಯನ್ನು ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ನೀಡುವುದು.
- ಶಾಲೆಗಳಿಂದ ಸಂಗ್ರಹಿಸಲಾದ ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ಮೌಲ್ಯಮಾಪನ ಕೇಂದ್ರಗಳಲ್ಲಿ ಸಂರಕ್ಷಿಸಿಡುವಂತೆ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಚನೆ ನೀಡುವುದು.
- 5, 8 ಮತ್ತು 9ನೇ ತರಗತಿಯ ಮೌಲ್ಯಮಾಪನವನ್ನು ತಾಲ್ಲೂಕು ಕೇಂದ್ರದಲ್ಲಿ ಅಂತರ್ ಕ್ಲಸ್ಟರ್‌ವಾರು ನಡೆಸಬೇಕಿದ್ದು, ಈ ಸಂಬಂಧ ಸೂಕ್ತ ವ್ಯವಸ್ಥೆಯನ್ನು ಮಾಡಿಕೊಂಡು ಕ್ರಮವಹಿಸುವಂತೆ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಚಿಸುವುದು.
- ಮೌಲ್ಯಮಾಪನ ಪೂರ್ಣಗೊಂಡ ನಂತರ ಎಲ್ಲಾ ಶಾಲೆಗಳಿಗೂ ಉತ್ತರಿಸಿದ ಪತ್ರಿಕೆಗಳನ್ನು ಹಿಂದಿರುಗಿಸಲಾಗುತ್ತದೆ. ಎಲ್ಲಾ ಶಾಲೆಯವರು ಎಸ್.ಎ.ಟಿ.ಎಸ್. ನಲ್ಲಿ ದಿನಾಂಕ:28.03.2024 ರಿಂದ 03.04.2024 ರೊಳಗೆ ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನು ಕ್ರೋಢೀಕರಿಸಿ ಗ್ರೇಡ್‌ಗಳಿಗೆ ಪರಿವರ್ತಿಸಿ ನಮೂದಿಸಲು ಕ್ರಮಕೈಗೊಳ್ಳುವುದು ಹಾಗೂ ಈ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- ಸಮುದಾಯದತ್ತ ಶಾಲೆಯ ದಿನದಂದು ವಿದ್ಯಾರ್ಥಿಗಳ ಫಲಿತಾಂಶವನ್ನು ಆಯಾ ಶಾಲೆಗಳಲ್ಲಿ ಪ್ರಕಟಿಸುವಂತೆ ಕ್ರಮಕೈಗೊಳ್ಳುವುದು. ಸದರಿ ಫಲಿತಾಂಶವನ್ನು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಮಾತ್ರ ತಿಳಿಯುವಂತೆ ಕ್ರಮವಹಿಸುವುದು.

**ಉಪನಿರ್ದೇಶಕರು(ಅಭಿವೃದ್ಧಿ) ರವರ ಜವಾಬ್ದಾರಿಗಳು:**

- ಮೌಲ್ಯಮಾಪನ ಕಾರ್ಯ ನಿರ್ವಹಿಸುವ ಸಂಪೂರ್ಣ ಜವಾಬ್ದಾರಿ ಜಿಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ರವರದ್ದಾಗಿದ್ದು, ಈ ಸಂಬಂಧ ಡಯಟ್‌ನ ಓರ್ವ ಅಧಿಕಾರಿಯನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡುವುದು.
- ಮೌಲ್ಯಮಾಪನ ನಡೆಯುವ ಕೇಂದ್ರಗಳಿಗೆ ಭೇಟಿ ನೀಡಲು ಅಧಿಕಾರಿಗಳನ್ನು ನೇಮಿಸುವುದು.
- 5ನೇ ತರಗತಿ ಮೌಲ್ಯಮಾಪನದ ಉಸ್ತುವಾರಿಯನ್ನು ಸಂಬಂಧಿಸಿದ ತಾಲ್ಲೂಕಿನ ಕ್ಷೇತ್ರಸಮನ್ವಯಾಧಿಕಾರಿಗಳು ಹಾಗೂ 8 ಮತ್ತು 9ನೇ ತರಗತಿ ಮೌಲ್ಯಮಾಪನದ ಉಸ್ತುವಾರಿಯನ್ನು ಡಯಟ್‌ನ ಉಪನ್ಯಾಸಕರು ನಿರ್ವಹಿಸಬೇಕಿದ್ದು, ಕೊರತೆಯಾದಲ್ಲಿ ವಿಷಯ ಪರಿವೀಕ್ಷಕರನ್ನು ನಿಯೋಜಿಸಲು ಕ್ರಮವಹಿಸುವುದು.
- ಮೌಲ್ಯಮಾಪನ ಕಾರ್ಯಕ್ಕೆ ಅಗತ್ಯವಿರುವ ತರಗತಿವಾರು, ವಿಷಯವಾರು ಶಿಕ್ಷಕರನ್ನು(ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ, ಅನುದಾನ ರಹಿತ ಮತ್ತು ವಸತಿ ಶಾಲೆಗಳನ್ನು ಒಳಗೊಂಡಂತೆ) ನೇಮಿಸಿಕೊಳ್ಳುವಂತೆ ಕ್ಷೇತ್ರಶಿಕ್ಷಣಾಧಿಕರಿಗಳಿಗೆ ಸೂಚಿಸುವುದು ಹಾಗೂ ನೇಮಿಸಿಕೊಂಡಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- ಮೌಲ್ಯಮಾಪನ ಕಾರ್ಯಕ್ಕೆ ಆಯ್ಕೆ ಮಾಡಲಾಗಿರುವ ಕೇಂದ್ರಗಳ ಮಾಹಿತಿಯನ್ನು ಉಪನಿರ್ದೇಶಕರು (ಆಡಳಿತ) ರವರಿಂದ ಪಡೆದು ಮೌಲ್ಯಮಾಪನ ಕಾರ್ಯನಿರ್ವಹಣೆಗೆ ಕ್ರಮವಹಿಸುವುದು.

- 5ನೇ ತರಗತಿಯ ಮೌಲ್ಯಮಾಪನ ಕಾರ್ಯವನ್ನು ದಿನಾಂಕ:15.03.2024 ರಿಂದ 20.03.2024 ರೊಳಗೆ ಹಾಗೂ 8 ಮತ್ತು 9ನೇ ತರಗತಿಯ ಮೌಲ್ಯಮಾಪನ ಕಾರ್ಯವನ್ನು ದಿನಾಂಕ:18.03.2024 ರಿಂದ 23.03.2024 ರೊಳಗಾಗಿ ಪೂರ್ಣಗೊಳಿಸುವುದು.
- 5, 8 ಮತ್ತು 9ನೇ ತರಗತಿಯ ಮೌಲ್ಯಮಾಪನವನ್ನು ತಾಲ್ಲೂಕು ಹಂತದಲ್ಲಿ ಅಂತರ್ ಕ್ಲಸ್ಟರ್‌ವಾರು ನಡೆಸಬೇಕಾಗಿರುವುದರಿಂದ ಬೇರೆ ಕ್ಲಸ್ಟರ್‌ನ ಶಾಲೆಯ ಉತ್ತರ ಪತ್ರಿಕೆಗಳನ್ನು ನೀಡಿ ಮೌಲ್ಯಮಾಪನ ಮಾಡಿಸುವುದು.
- 5, 8 ಮತ್ತು 9ನೇ ತರಗತಿಯ ಮೌಲ್ಯಮಾಪನ ಕಾರ್ಯಪೂರ್ಣಗೊಂಡ ನಂತರ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಬಿ.ಆರ್.ಸಿ ಗಳ ಮೂಲಕ ಉತ್ತರ ಪತ್ರಿಕೆಗಳನ್ನು ಶಾಲೆಗಳಿಗೆ ದಿನಾಂಕ:28.03.2024 ರೊಳಗೆ ಮರುರವಾನಿಸುವುದು.
- ಡಿಎಸ್ಇಆರ್‌ಟಿ ರವರ ವಿಶ್ಲೇಷಣಾ ಕಾರ್ಯದ ನಂತರ ಡಯಟ್ ಪ್ರಾಂಶುಪಾಲರು ಶಾಲೆಗಳಲ್ಲಿ ಅಗತ್ಯ ಅನುಪಾಲನಾ ಕ್ರಮಕೈಗೊಳ್ಳುವುದರ ಮೂಲಕ ಗುಣಮಟ್ಟದ ಶಿಕ್ಷಣದ ಅನುಷ್ಠಾನಕ್ಕೆ ಸಂಬಂಧಿಸಿದ ಅಧಿಕಾರಿಗಳಿಗೆ ಮಾರ್ಗದರ್ಶಿಸುವುದು.

**ಕ್ಷೇತ್ರ ಶಿಕ್ಷಣಾಧಿಕಾರಿಗಳ ಜವಾಬ್ದಾರಿಗಳು:**

➢ **ಪೂರ್ವ ತಯಾರಿ:**

- ತಾಲ್ಲೂಕಿನಲ್ಲಿ ಮೌಲ್ಯಾಂಕನವನ್ನು ನಿರ್ವಹಿಸುವ ಸಂಪೂರ್ಣ ಜವಾಬ್ದಾರಿಯು ಆಯಾ ತಾಲ್ಲೂಕು ಕ್ಷೇತ್ರಶಿಕ್ಷಣಾಧಿಕಾರಿಗಳದ್ದಾಗಿದ್ದು, ಬ್ಲಾಕ್ ಹಂತದಿಂದ ಓರ್ವ ನೋಡಲ್ ಅಧಿಕಾರಿಯನ್ನು ನೇಮಕ ಮಾಡುವುದು.
- ಬ್ಲಾಕ್ ವ್ಯಾಪ್ತಿಯಲ್ಲಿ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳ 5, 8 ಮತ್ತು 9ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳು ಎಸ್.ಎ.ಟಿ.ಎಸ್.ನಲ್ಲಿ ನೋಂದಾಯಿಸಿಕೊಳ್ಳುವಂತೆ ಮತ್ತು ಯಾವುದೇ ವಿದ್ಯಾರ್ಥಿಗಳು ಮೌಲ್ಯಾಂಕನದಿಂದ ವಂಚಿತರಾಗದಂತೆ ಸೂಕ್ತ ಕ್ರಮವಹಿಸುವುದು ಮತ್ತು ಶಾಲೆಗಳಿಗೆ ಮಾಹಿತಿ ನೀಡುವುದು.
- ವಿದ್ಯಾರ್ಥಿಗಳ ಮಾಧ್ಯಮ, ಪ್ರಥಮಭಾಷೆ, ದ್ವಿತೀಯಭಾಷೆ, ತೃತೀಯ ಭಾಷೆಗಳನ್ನು ಸರಿಯಾಗಿ ಎಸ್.ಎ.ಟಿ.ಎಸ್.ನಲ್ಲಿ ನಮೂದಿಸಲಾಗಿದೆಯೇ ಎಂದು ಪರಿಶೀಲಿಸಿಕೊಳ್ಳುವಂತೆ ಸಂಬಂಧಿಸಿದ ಶಾಲೆಗಳಿಗೆ ತಿಳಿಸುವುದು.
- ಆಯಾ ಶಾಲೆಗಳೇ ಮೌಲ್ಯಾಂಕನ ಕೇಂದ್ರಗಳಾಗಿದ್ದು, ಮುಖ್ಯಸ್ಥರಾಗಿ ಸಂಬಂಧಿಸಿದ ಶಾಲಾ ಮುಖ್ಯಶಿಕ್ಷಕರನ್ನು ಹಾಗೂ ಕೊಠಡಿ ಮೇಲ್ವಿಚಾರಕರನ್ನಾಗಿ ಕ್ಲಸ್ಟರ್ ವ್ಯಾಪ್ತಿಯ ಶಾಲೆಗಳ ಶಿಕ್ಷಕರನ್ನು ಬದಲಾಯಿಸಿ ನಿಯೋಜನೆ ಮಾಡುವುದು.
- ರಾಜ್ಯ ಕಛೇರಿಯಿಂದ ನೀಡಲಾದ ಪ್ರಶ್ನೆಪತ್ರಿಕೆಗಳನ್ನು ಬ್ಲಾಕ್ ಹಂತದಲ್ಲಿ/ತಮ್ಮ ಕಛೇರಿ ಹಂತದಲ್ಲಿರುವ ಭದ್ರತಾ ಕೊಠಡಿಯಲ್ಲಿರಿಸಿ ಮೌಲ್ಯಾಂಕನ ನಡೆಯುವ ಪ್ರತಿ ದಿನ ಶಾಲಾ ಹಂತಕ್ಕೆ ಸುರಕ್ಷಿತವಾಗಿ ಸರಬರಾಜು ಮಾಡಲು ಅಗತ್ಯ ಕ್ರಮವಹಿಸುವುದು.
- ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ಉತ್ತರಿಸಲು ಅವಶ್ಯಕವಿರುವ ಉತ್ತರ ಹಾಳೆಯ ಮುಖಪುಟದ ಮಾದರಿಯನ್ನು ರಾಜ್ಯ ಕಛೇರಿಯಿಂದ ವೆಬ್‌ಸೈಟ್‌ನಲ್ಲಿ ಲಭ್ಯ ಮಾಡಲಾಗುವುದು ಅದರಂತೆ ವಿದ್ಯಾರ್ಥಿಗಳು ಉತ್ತರಿಸಬೇಕಾದ ಹಾಳೆಗಳೊಂದಿಗೆ ಮುಖ ಪುಟವನ್ನು ಸೇರಿಸಿ ಮೌಲ್ಯಾಂಕನಕ್ಕೆ ಹಾಜರಾಗುವಂತೆ ಶಾಲೆಗಳ ಮುಖ್ಯ ಶಿಕ್ಷಕರು/ಪ್ರಾಂಶುಪಾಲರು ತಿಳಿಸುವಂತೆ ಸೂಚಿಸಿ ಅಗತ್ಯ ಕ್ರಮವಹಿಸುವುದು.
- ಶಾಲೆಗಳಿಗೆ ಗೌಪ್ಯ ಸಾಮಗ್ರಿಗಳ ರವಾನೆ ಹಾಗೂ ಮೌಲ್ಯಮಾಪನ ಕೇಂದ್ರಕ್ಕೆ ಮರುರವಾನೆಗಾಗಿ ಸೂಕ್ತ ವ್ಯವಸ್ಥೆ (ವಾಹನ, ಮಾರ್ಗ ನಕ್ಷೆ, ವೇಳಾಪಟ್ಟಿ) ಮಾಡಿಕೊಂಡು ಉಪನಿರ್ದೇಶಕರು (ಆಡಳಿತ) ರವರಿಂದ ಅನುಮೋದನೆ ಪಡೆಯುವುದು.
- ರಾಜ್ಯ ಕಛೇರಿಯಿಂದ ಸಿದ್ಧಪಡಿಸಿ ನೀಡಲಾಗುವ ವಿಷಯಗಳ ಪ್ರಶ್ನೆಪತ್ರಿಕೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ವಿಷಯಗಳ ಉದಾ: ಚಿತ್ರಕಲೆ ಹಾಗೂ ಇತರೆ ವಿಷಯಗಳಿಗೆ ಮೌಲ್ಯಾಂಕನವನ್ನು ಶಾಲಾ ಹಂತದಲ್ಲಿಯೇ ನಿರ್ವಹಿಸಿಕೊಳ್ಳುವುದು.
- ಮೌಲ್ಯಾಂಕನಕ್ಕೆ ಸರಬರಾಜಾಗುವ ಪ್ರಶ್ನೆಪತ್ರಿಕೆಗಳನ್ನಿರಿಸಲಾದ ಲಕೋಟೆಗಳಲ್ಲಿಯೇ ಉತ್ತರಿಸಿದ ಪತ್ರಿಕೆಗಳನ್ನಿಟ್ಟು ಬಂಡಲ್ ಮಾಡಿ ಮುಖ ಪುಟದಲ್ಲಿ ನೀಡಲಾದ ಮಾಹಿತಿಗಳನ್ನು ಭರ್ತಿ ಮಾಡಿ ಸಂಬಂಧಿಸಿದ ಅಧಿಕಾರಿಗಳಿಗೆ ಹಿಂದಿರುಗಿಸುವಂತೆ ಕ್ರಮವಹಿಸುವುದು.

- ಮೌಲ್ಯಮಾಪನ ಕಾರ್ಯಕ್ಕಾಗಿ ಮೌಲ್ಯಮಾಪನ ಕೇಂದ್ರಗಳನ್ನು ಗುರುತಿಸುವುದು ಸದರಿ ಪಟ್ಟಿಗೆ ಉಪನಿರ್ದೇಶಕರು (ಆಡಳಿತ) ರವರಿಂದ ಅನುಮೋದನೆ ಪಡೆಯುವುದು.
- ಮೌಲ್ಯಮಾಪನ ಕಾರ್ಯಕ್ಕೆ ಅಗತ್ಯವಿರುವ ತರಗತಿವಾರು, ವಿಷಯವಾರು ಶಿಕ್ಷಕರನ್ನು (ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ, ಅನುದಾನ ರಹಿತ ಮತ್ತು ವಸತಿ ಶಾಲೆಗಳನ್ನು ಒಳಗೊಂಡಂತೆ) ಗುರುತಿಸಿ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಮಾಹಿತಿ ನೀಡುವುದು.
- ಮೌಲ್ಯಾಂಕನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ಮುಖ್ಯಶಿಕ್ಷಕರ ಸಭೆಯನ್ನು ಕರೆದು ಮಾಹಿತಿಯನ್ನು ನೀಡುವುದು.

➢ **ಮೌಲ್ಯಾಂಕನದ ದಿನ:**

- ಎಲ್ಲಾ ಶಾಲೆಗಳಲ್ಲಿ ನಿಗದಿತ ವೇಳಾಪಟ್ಟಿಯಂತೆ ಮೌಲ್ಯಾಂಕನ ಕಾರ್ಯನಿರ್ವಹಿಸುವುದು.
- ಶಾಲೆಗಳಲ್ಲಿ ಯಾವುದೇ ಗೊಂದಲಕ್ಕೆ ಆಸ್ಪದವಾಗದಂತೆ ಮೌಲ್ಯಾಂಕನವನ್ನು ನಡೆಸುವ ಬಗ್ಗೆ ಕ್ರಮವಹಿಸುವುದು ಹಾಗೂ ಮೌಲ್ಯಾಂಕನವು ಯಶಸ್ವಿಯಾಗಿ ನಡೆದಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- ರಚಿಸಿಕೊಂಡಿರುವ ಮಾರ್ಗಗಳಂತೆ ಪ್ರತಿದಿನ ಪ್ರಶ್ನೆಪತ್ರಿಕೆಗಳನ್ನು ಶಾಲಾ ಹಂತಕ್ಕೆ ಸುರಕ್ಷಿತವಾಗಿ ಸರಬರಾಜು ಮಾಡಲು ಅಗತ್ಯ ಕ್ರಮವಹಿಸುವುದು.
- ಪ್ರತಿದಿನದ ಮೌಲ್ಯಾಂಕನ ಕಾರ್ಯ ಪೂರ್ಣಗೊಂಡ ನಂತರ ಶಾಲೆ/ಮೌಲ್ಯಾಂಕನ ಕೇಂದ್ರದ ಮುಖ್ಯ ಅಧೀಕ್ಷಕರು ಉತ್ತರಿಸಿದ ಉತ್ತರಪತ್ರಿಕೆಗಳನ್ನು ವಿಷಯವಾರು ಸರಿಯಾಗಿ ಬಂಡಲ್ ಮಾಡಿ ಸಂಬಂಧಿಸಿದ ಸಿ.ಆರ್.ಪಿಗಳು/ ಕ್ಷೇತ್ರಶಿಕ್ಷಣಾಧಿಕಾರಿಗಳಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳಿಗೆ ನೀಡುವುದು.
- ಸಿ.ಆರ್.ಪಿಗಳು/ಕ್ಷೇತ್ರಶಿಕ್ಷಣಾಧಿಕಾರಿಗಳಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳು ಶಾಲೆಗಳಿಂದ ಸ್ವೀಕರಿಸಿದ ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ಸಂರಕ್ಷಿಸಿಟ್ಟು ಅಂತಿಮ ದಿನದ ಮೌಲ್ಯಾಂಕನ ಮುಕ್ತಾಯವಾದ ನಂತರ ಎಲ್ಲಾ ದಿನದ/ ಎಲ್ಲಾ ವಿಷಯಗಳ ಬಂಡಲ್‌ಗಳನ್ನು ಈಗಾಗಲೇ ಗುರುತಿಸಲಾಗಿರುವ ಮೌಲ್ಯಮಾಪನ ಕೇಂದ್ರಕ್ಕೆ ರವಾನೆ ಮಾಡುವಂತೆ ಕ್ರಮವಹಿಸುವುದು.
- ಗೌಪ್ಯತೆ ಮತ್ತು ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ಮೌಲ್ಯಾಂಕನವನ್ನು ನಡೆಸುವುದು.

➢ **ಮೌಲ್ಯಾಂಕನದ ನಂತರ:**

- ಮೌಲ್ಯಮಾಪನ ಕಾರ್ಯದ ಜವಾಬ್ದಾರಿಯನ್ನು ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ನೀಡಲಾಗಿದ್ದು, ಈ ಸಂಬಂಧ ಸದರಿಯವರು ನೀಡಲಾಗುವ ಮಾಹಿತಿಗಳಂತೆ ಕಾರ್ಯನಿರ್ವಹಿಸುವುದು.
- 5ನೇ ತರಗತಿಯ ಮೌಲ್ಯಮಾಪನ ಕಾರ್ಯದ ನಿರ್ವಹಣೆಗಾಗಿ ಬಿ.ಆರ್.ಸಿ ರವರನ್ನು ನೇಮಿಸುವುದು.
- ನಿಗದಿತ ದಿನಾಂಕದಂದು ಮೌಲ್ಯಮಾಪನ ಪ್ರಕ್ರಿಯೆಯನ್ನು ಚಾಲನೆಗೊಳಿಸುವುದು.
- 5, 8 ಮತ್ತು 9ನೇ ತರಗತಿಯ ಮೌಲ್ಯಮಾಪನವನ್ನು ತಾಲ್ಲೂಕು ಕೇಂದ್ರದಲ್ಲಿ ಅಂತರ್ ಕ್ಲಸ್ಟರ್‌ವಾರು ನಡೆಸಲಾಗುತ್ತಿದ್ದು, ಈ ಸಂಬಂಧ ಕ್ಷೇತ್ರಶಿಕ್ಷಣಾಧಿಕಾರಿಗಳು ಸೂಕ್ತ ವಾಹನ ವ್ಯವಸ್ಥೆಯನ್ನು ಮತ್ತು ಮಾರ್ಗ ನಕ್ಷೆಯನ್ನು ಸಿದ್ಧಪಡಿಸಿಕೊಂಡು ಅದರಂತೆ ಕಾರ್ಯನಿರ್ವಹಿಸುವುದು. ಈ ಸಂಬಂಧ ಉಪನಿರ್ದೇಶಕರು(ಆಡಳಿತ) ರವರ ಅನುಮೋದನೆಯನ್ನು ಪಡೆಯುವುದು.
- ಆಯಾ ತರಗತಿಯ ಮೌಲ್ಯಾಂಕನ ಕಾರ್ಯ ಪೂರ್ಣಗೊಂಡ ನಂತರ ತಮ್ಮ ಬ್ಲಾಕ್ ಹಂತದ ಎಲ್ಲಾ ಶಾಲೆಗಳಿಂದ ಉತ್ತರಿಸಲಾದ ಎಲ್ಲಾ ವಿಷಯಗಳ ಬಂಡಲ್‌ಗಳನ್ನು ಪಡೆದು ತರಗತಿವಾರು ಪ್ರತ್ಯೇಕಿಸಿ ಸಂಬಂಧಿಸಿದ ಮೌಲ್ಯಮಾಪನ ಕೇಂದ್ರಕ್ಕೆ ರವಾನಿಸುವುದು.
- ಮೌಲ್ಯಮಾಪನ ಕಾರ್ಯ ಪೂರ್ಣಗೊಂಡ ನಂತರ ಉತ್ತರ ಪತ್ರಿಕೆಗಳನ್ನು ಶಾಲೆಗಳಿಗೆ ದಿನಾಂಕ:28.03.2024ರೊಳಗೆ ತಲುಪುವಂತೆ ಮರುರವಾನಿಸುವುದು.
- ವಿದ್ಯಾರ್ಥಿಗಳು ಗಳಿಸಿರುವ ಅಂಕಗಳನ್ನು ಕ್ರೋಢೀಕರಿಸಿ ಗ್ರೇಡ್‌ಗಳಿಗೆ ಪರಿವರ್ತಿಸಿ ದಿನಾಂಕ:28.03.2024 ರಿಂದ 03.04.2024 ರ ಒಳಗಾಗಿ ಎಸ್.ಎ.ಟಿ.ಎಸ್.ನಲ್ಲಿ ನಮೂದಿಸಲು ಮುಖ್ಯ ಶಿಕ್ಷಕರಿಗೆ ತಿಳಿಸುವುದು.

- ಸಮುದಾಯದತ್ತ ಶಾಲೆಯ ದಿನದಂದು ವಿದ್ಯಾರ್ಥಿಗಳ ಫಲಿತಾಂಶವನ್ನು ಆಯಾ ಶಾಲೆಗಳಲ್ಲಿ ಸಂಬಂಧಿಸಿದ ವಿದ್ಯಾರ್ಥಿ ಹಾಗೂ ಪೋಷಕರಿಗೆ ಮಾತ್ರ ನೀಡುವುದು.

**ಶಾಲಾ ಮುಖ್ಯ ಶಿಕ್ಷಕರ ಕರ್ತವ್ಯ ಮತ್ತು ಜವಾಬ್ದಾರಿಗಳು:**

➢ **ಪೂರ್ವ ತಯಾರಿ:**

- ಎಸ್.ಎ.ಟಿ.ಎಸ್. ತಂತ್ರಾಂಶದಲ್ಲಿ ಶಾಲೆಯ ಹಾಗೂ ವಿದ್ಯಾರ್ಥಿಗಳ ತರಗತಿವಾರು, ಮಾಧ್ಯಮವಾರು, ಭಾಷಾವಾರು ಮಾಹಿತಿಗಳನ್ನು ಸ್ಪಷ್ಟವಾಗಿ ಹಾಗೂ ನಿಖರವಾಗಿ ನಮೂದಿಸುವುದು.
- ಕ್ಷೇತ್ರಶಿಕ್ಷಣಾಧಿಕಾರಿಗಳು ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಆಯೋಜಿಸುವ ಪೂರ್ವಭಾವಿ ಸಭೆಗೆ ತಪ್ಪದೇ ಹಾಜರಾಗಿ ಮಾಹಿತಿಯನ್ನು ಪಡೆಯುವುದು.
- ಮೌಲ್ಯಾಂಕನದ ಸ್ವರೂಪ ಮತ್ತು ವೇಳಾಪಟ್ಟಿಯ ಕುರಿತು ವಿದ್ಯಾರ್ಥಿಗಳಿಗೆ ಸಂಪೂರ್ಣ ಮಾಹಿತಿಯನ್ನು ನೀಡುವುದು.
- **ರಾಜ್ಯ ಕಛೇರಿಯಿಂದ ನೀಡಲಾಗುವ ವಿಷಯಗಳ ಪ್ರಶ್ನೆಪತ್ರಿಕೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ವಿಷಯಗಳ ಮೌಲ್ಯಾಂಕನಕ್ಕೆ ಹಾಗೂ ಎಲ್ಲಾ ವಿಷಯಗಳ ಮೌಖಿಕ ಪರೀಕ್ಷೆಗೆ ಪ್ರಶ್ನೆಪತ್ರಿಕೆಗಳನ್ನು ಶಾಲಾ ಹಂತದಲ್ಲಿಯೇ ನಿರ್ವಹಿಸಿಕೊಳ್ಳುವುದು.**
- ಪ್ರತಿ ಕೊಠಡಿಗೆ 24 ವಿದ್ಯಾರ್ಥಿಗಳಂತೆ ಆಸನ ವ್ಯವಸ್ಥೆ ಮಾಡುವುದು ಮತ್ತು ಅಗತ್ಯತೆಗೆ ಅನುಗುಣವಾಗಿ ಕೊಠಡಿ ಮೇಲ್ವಿಚಾರಕರನ್ನು ನೇಮಿಸಿಕೊಳ್ಳುವುದು.
- ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ಉತ್ತರಿಸಲು ಅವಶ್ಯಕವಿರುವ ಉತ್ತರ ಹಾಳೆಯ ಮುಖಪುಟದ ಮಾದರಿಯನ್ನು ರಾಜ್ಯ ಕಛೇರಿಯಿಂದ ವೆಬ್‌ಸೈಟ್‌ನಲ್ಲಿ ಲಭ್ಯ ಮಾಡಲಾಗುವುದು ಅದರಂತೆ ವಿದ್ಯಾರ್ಥಿಗಳು ಉತ್ತರಿಸಬೇಕಾದ ಹಾಳೆಗಳೊಂದಿಗೆ ಮುಖ ಪುಟವನ್ನು ಸೇರಿಸಿ ಮೌಲ್ಯಾಂಕನಕ್ಕೆ ಹಾಜರಾಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
- ತಮ್ಮ ಶಾಲೆಯಲ್ಲಿ ನೋಂದಣಿಯಾದ ಎಲ್ಲಾ ವಿದ್ಯಾರ್ಥಿಗಳ ಪ್ರತಿ ವಿಷಯದ ಹಾಜರಾತಿ ಮತ್ತು ಗೈರು ಹಾಜರಾತಿ ವಹಿಯನ್ನು ತಮ್ಮ ಹಂತದಲ್ಲಿಯೇ ನಿರ್ವಹಿಸಿಕೊಂಡು ಮೌಲ್ಯಾಂಕನದ ದಿನ ಹಾಜರಾದ ವಿದ್ಯಾರ್ಥಿಗಳ ಸಹಿ ಪಡೆಯುವುದು ಹಾಗೂ ವಿದ್ಯಾರ್ಥಿಗಳು ಗೈರು ಹಾಜರಾದಲ್ಲಿ ಗೈರು ಎಂದು ನಮೂದಿಸುವುದು.(ಪ್ರತಿ ದಿನದ ತರಗತಿವಾರು, ವಿಷಯವಾರು ಪ್ರತ್ಯೇಕ ಹಾಜರಾತಿ ಮತ್ತು ಗೈರು ಹಾಜರಾತಿ ವಹಿ ನಿರ್ವಹಿಸುವುದು)
- ಕ್ಷೇತ್ರಶಿಕ್ಷಣಾಧಿಕಾರಿಗಳ ಮಾರ್ಗದರ್ಶನದಂತೆ ಮೌಲ್ಯಾಂಕನ ನಡೆಸಲು ಸೂಕ್ತ ಕ್ರಮವಹಿಸುವುದು.

➢ **ಮೌಲ್ಯಾಂಕನದ ದಿನ:**

- ನಿಗದಿತ ವೇಳಾಪಟ್ಟಿಯಂತೆ ಮೌಲ್ಯಾಂಕನ ಕಾರ್ಯನಿರ್ವಹಿಸುವುದು.
- ಹಾಜರಾತಿ ಮತ್ತು ಗೈರು ಹಾಜರಾತಿ ವಹಿಯನ್ನು ತಮ್ಮ ಹಂತದಲ್ಲಿಯೇ ಸಿದ್ಧಪಡಿಸಿಕೊಂಡು ವಿದ್ಯಾರ್ಥಿಗಳಿಂದ ಸಹಿ ಪಡೆಯುವುದು.
- ವಿದ್ಯಾರ್ಥಿಗಳಿಗೆ ಪ್ರಶ್ನೆಗಳಿಗೆ ಉತ್ತರಿಸಲು ಉತ್ತರಪತ್ರಿಕೆಗಳನ್ನು ಒದಗಿಸುವುದು.
- ನಿಗದಿತ ಸಮಯಕ್ಕೆ ಕೊಠಡಿ ಮೇಲ್ವಿಚಾರಕರು ಪರೀಕ್ಷಾ ಕೊಠಡಿಯಲ್ಲಿ ಹಾಜರಿರುವಂತೆ ವ್ಯವಸ್ಥೆ ಮಾಡುವುದು.
- ಶಾಲೆಗಳಲ್ಲಿ ಯಾವುದೇ ಗೊಂದಲಕ್ಕೆ ಆಸ್ಪದವಾಗದಂತೆ ಮೌಲ್ಯಾಂಕನವನ್ನು ನಡೆಸುವ ಬಗ್ಗೆ ಕ್ರಮವಹಿಸುವುದು ಹಾಗೂ ಯಶಸ್ವಿಯಾಗಿ ಮೌಲ್ಯಾಂಕನವು ನಡೆದಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- ಪ್ರತಿದಿನದ ಪ್ರಶ್ನೆಪತ್ರಿಕೆಗಳನ್ನು ವಿಷಯವಾರು ತರಗತಿವಾರು ಪ್ರತ್ಯೇಕವಾಗಿ ಕವರ್‌ಗಳಲ್ಲಿ ನೀಡಲಾಗುತ್ತದೆ. ಅದೇ ಕವರ್‌ಗಳನ್ನು ಬಳಸಿ ಉತ್ತರಿಸಿದ ಪತ್ರಿಕೆಗಳನ್ನು ಬಂಡಲ್ ಮಾಡಲು ಉಪಯೋಗಿಸುವುದು ಮತ್ತು ಕವರ್ ಮೇಲೆ ನೀಡಲಾಗಿರುವ ಎಲ್ಲಾ ಮಾಹಿತಿಗಳನ್ನು ತಪ್ಪದೇ ನಮೂದಿಸುವುದು. **(ಜಿಲ್ಲೆಯ ಹೆಸರು, ಬ್ಲಾಕಿನ ಹೆಸರು, ಶಾಲೆಯ ಹೆಸರು, ಶಾಲೆಯ ಡೈಸ್ ಸಂಕೇತ, ವಿಷಯ, ಮಾಧ್ಯಮ, ಒಟ್ಟು ನೊಂದಾಯಿಸಿಕೊಂಡ, ಹಾಜರಾದ, ಗೈರು ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ)** ಈ ಎಲ್ಲಾ ಮಾಹಿತಿಗಳನ್ನು ನಮೂದಿಸಿದ ನಂತರ ಶಾಲೆಯ ಮುಖ್ಯ ಶಿಕ್ಷಕರು ಸಹಿ ಮಾಡಿ ಮೊಹರು ಹಾಕಿ ತರಗತಿವಾರು, ವಿಷಯವಾರು ಪ್ರತ್ಯೇಕ ಬಂಡಲ್ ತಯಾರಿಸುವುದು. (ವಿದ್ಯಾರ್ಥಿಗಳ ಹಾಜರಾತಿ ಮತ್ತು ಉತ್ತರ ಪತ್ರಿಕೆಯ ಸಂಖ್ಯೆಗೆ ತಾಳೆ ಹೊಂದಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ನಂತರ ಬಂಡಲ್ ಮಾಡುವುದು)
- ಶಾಲೆಯಲ್ಲಿ ಯಾವುದೇ ನಕಲು/ಅವ್ಯವಹಾರ ನಡೆಯದಂತೆ ಸೂಕ್ತ ಕ್ರಮವಹಿಸುವುದು.

- ವಿದ್ಯಾರ್ಥಿಗಳು ಪರೀಕ್ಷಾ ಕೊಠಡಿಗೆ ಯಾವುದೇ Mobile, Calculator, Smart & digital watch ಗಳನ್ನು ತರದಂತೆ ಕ್ರಮವಹಿಸುವುದು.
- ಪ್ರತಿ ದಿನದ ಮೌಲ್ಯಾಂಕನ ಕಾರ್ಯ ಪೂರ್ಣಗೊಂಡ ನಂತರ ಉತ್ತರಿಸಿದ ಪ್ರಶ್ನೆಪತ್ರಿಕೆಗಳ ಬಂಡಲ್‌ಗಳನ್ನು ಸರಿಯಾಗಿ ಬಂಡಲ್ ಮಾಡಿ ಸಿ.ಆರ್.ಪಿ/ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ನಿಯೋಜಿಸಲಾದ ಅಧಿಕಾರಿಗಳಿಗೆ ನೀಡುವುದು.

➢ **ಮೌಲ್ಯಾಂಕನದ ನಂತರ :**

- ಮೌಲ್ಯಮಾಪನ ಕಾರ್ಯಕ್ಕಾಗಿ ನಿಯೋಜನೆಗೊಂಡಿರುವ ಶಿಕ್ಷಕರನ್ನು ವಿಳಂಬಕ್ಕೆ ಆಸ್ಪದ ನೀಡದಂತೆ ಬಿಡುಗಡೆಗೊಳಿಸುವುದು.
- ಮೌಲ್ಯಮಾಪನ ಕಾರ್ಯ ಪೂರ್ಣಗೊಂಡ ನಂತರ ಉತ್ತರ ಪತ್ರಿಕೆಗಳನ್ನು ಶಾಲೆಗಳಿಗೆ ದಿನಾಂಕ: 28.03.2024 ರೊಳಗೆ ಹಿಂದಿರುಗಿಸಲಾಗುತ್ತಿದ್ದು, ಎಲ್ಲಾ ವಿದ್ಯಾರ್ಥಿಗಳ ಎಲ್ಲಾ ವಿಷಯಗಳ ಉತ್ತರಪತ್ರಿಕೆಗಳು ಇರುವುದನ್ನು ದೃಢೀಕರಿಸಿಕೊಂಡು ಹಿಂಪಡೆಯುವುದು.
- ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನು ಕ್ರೋಢೀಕರಿಸಿ ಗ್ರೇಡ್‌ಗಳಿಗೆ ಪರಿವರ್ತಿಸಿ ದಿನಾಂಕ:28.03.2024 ರಿಂದ 03.04.2024 ರೊಳಗೆ ಎಸ್.ಎ.ಟಿ.ಎಸ್.ನಲ್ಲಿ ನಮೂದಿಸುವುದು.
- ಸಮುದಾಯದತ್ತ ಶಾಲೆಯ ದಿನದಂದು ವಿದ್ಯಾರ್ಥಿಗಳ ಫಲಿತಾಂಶವನ್ನು ಆಯಾ ಶಾಲೆಗಳಲ್ಲಿ ಸಂಬಂಧಿಸಿದ ವಿದ್ಯಾರ್ಥಿ ಹಾಗೂ ಪೋಷಕರಿಗೆ ಮಾತ್ರ ನೀಡುವುದು.

**ಪ್ಯಾಕಿಂಗ್ ವಿಧಾನ:**

- ಪ್ರತಿದಿನದ ಮೌಲ್ಯಾಂಕನ ಪೂರ್ಣಗೊಂಡ ನಂತರ ಮುಖ್ಯ ಶಿಕ್ಷಕರು ತಂಡದ ಇತರರ ಸಹಾಯ ಪಡೆದು ಉತ್ತರಿಸಿದ ಪ್ರಶ್ನೆಪತ್ರಿಕೆಗಳ ಪ್ಯಾಕೆಟ್‌ಗಳನ್ನು ಸಿದ್ಧಪಡಿಸುವುದು.
- ಈಗಾಗಲೇ ಪ್ರಶ್ನೆಪತ್ರಿಕೆಗಳು ಸರಬರಾಜಾಗಿರುವ ಕವರ್‌ಗಳಲ್ಲಿಯೇ ಆಯಾ ವಿಷಯಗಳ ಉತ್ತರಿಸಿದ ಉತ್ತರಪತ್ರಿಕೆಗಳನ್ನಿರಿಸುವುದು. ಕವರ್‌ನ ಮೇಲೆ ನೀಡಲಾಗಿರುವ ಎಲ್ಲಾ ಮಾಹಿತಿಗಳನ್ನು ತಪ್ಪದೇ ಭರ್ತಿ ಮಾಡಿ ವಿಷಯವಾರು ಪ್ರತ್ಯೇಕ ಬಂಡಲ್ ತಯಾರಿಸುವುದು(ಉತ್ತರ ಪತ್ರಿಕೆಗಳನ್ನಿರಿಸಲು ಪ್ರತ್ಯೇಕ ಕವರ್ ನೀಡುವುದಿಲ್ಲ. ಈಗಾಗಲೇ ಪ್ರಶ್ನೆಪತ್ರಿಕೆಗಳು ಸರಬರಾಜು ಮಾಡಿರುವ ಕವರ್‌ಗಳಲ್ಲಿರಿಸಿ ವಾಪಸ್ ನೀಡುವುದು).

ಕರ್ನಾಟಕ ಸರ್ಕಾರವು ರಾಜ್ಯದ 35 ಶೈಕ್ಷಣಿಕ ಜಿಲ್ಲೆಗಳ 204 ಬ್ಲಾಕ್‌ಗಳಲ್ಲಿ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಎಲ್ಲಾ ಸರ್ಕಾರಿ, ಅನುದಾನಿತ, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಸೇರಿದಂತೆ ಎಲ್ಲಾ ವಸತಿ ಶಾಲೆಗಳು ಹಾಗೂ ಅನುದಾನ ರಹಿತ ಶಾಲೆಗಳಲ್ಲಿ 5, 8 ಮತ್ತು 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೌಲ್ಯಾಂಕನವನ್ನು ನಡೆಸಲಿದ್ದು, ಶೈಕ್ಷಣಿಕ ಗುಣಮಟ್ಟ ಸುಧಾರಣೆ ಕೈಗೊಳ್ಳುವ ಉದ್ದೇಶ ಹೊಂದಿರುವ ಈ ಮೌಲ್ಯಾಂಕನ ಕಾರ್ಯವನ್ನು ಎಲ್ಲಾ ಹಂತದ ಅಧಿಕಾರಿಗಳು, ಮುಖ್ಯ ಶಿಕ್ಷಕರು, ಶಿಕ್ಷಕರು ಸಹಕರಿಸಿ ಯಶಸ್ವಿಗೊಳಿಸುವಂತೆ ಈ ಮೂಲಕ ತಿಳಿಸಿದೆ.

Manjushree 26/2/24.

ಅಧ್ಯಕ್ಷರು
ಕರ್ನಾಟಕ ಶಾಲಾ ಪರೀಕ್ಷೆ
ಮತ್ತು ಮೌಲ್ಯನಿರ್ಣಯ ಮಂಡಲಿ
ಬೆಂಗಳೂರು

ಪ್ರತಿಯನ್ನು,

1) ಎಲ್ಲಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಸೂಕ್ತ ಕ್ರಮಕ್ಕಾಗಿ.
2) ಎಲ್ಲಾ ಬ್ಲಾಕ್‌ಗಳ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
3) ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮುಖ್ಯ ಶಿಕ್ಷಕರು/ಪ್ರಾಂಶುಪಾಲರು ಕ್ಷೇತ್ರಶಿಕ್ಷಣಾಧಿಕಾರಿಗಳ ಮೂಲಕ ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು ಗೌರವ ಪೂರ್ವಕವಾಗಿ ಮಾಹಿತಿಗಾಗಿ,

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರಿಗೆ.

2) ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ.
3) ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ರವರಿಗೆ.
4) ಮಾನ್ಯ ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರ್ಗಿ ಮತ್ತು ಧಾರವಾಡ ರವರಿಗೆ.
5) ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ.
6) ನಿರ್ದೇಶಕರು, ಪ್ರೌಢಶಿಕ್ಷಣ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ.
7) ನಿರ್ದೇಶಕರು, ಭಾಷಾ ಅಲ್ಪಸಂಖ್ಯಾಂತರ ನಿರ್ದೇಶನಾಲಯ, ಬೆಂಗಳೂರು ರವರಿಗೆ.
8) ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು ರವರಿಗೆ.
9) ಕಾರ್ಯನಿರ್ವಾಹಕ ನಿರ್ದೇಶಕರು, ವಸತಿ ಶಾಲೆಗಳ ಸಂಘ, ಬೆಂಗಳೂರು ರವರಿಗೆ.